ಒಎಸ್ ನಂಬರ್:223/2013
ಪಿಡಬ್ಲ್ಯೂಃ 2

ಸಾಕ್ಷಿಯನ್ನು ಕರೆಸಿ ದಿನಾಂಕಃ 08-12-2015 ರಂದು ಪ್ರಮಾಣಿಸಲಾಯಿತು.

ಪಾಟಿ ಸವಾಲು ಃ- ಪ್ರತಿವಾದಿಗಳ ಪರ ಶ್ರೀ ಡಿವಿಎಂ ವಕೀಲರಿಂದಃ-

ನನ್ನ ತಂದೆಯ ತಂಗಿಯ ಹೆಸರು ರುಕ್ಕಮ್ಮ ಎಂದರೆ ಸರಿಯಲ್ಲ. ವಾದಿಯ ಪತ್ನಿಯ ಹೆಸರು ರುಕ್ಕಮ್ಮ. ಆಕೆ ನನ್ನ ಚಿಕ್ಕಪ್ಪನ ಮಗಳು. ನನ್ನ ಚಿಕ್ಕಪ್ಪನ ಹೆಸರು ರಾಮರೆಡ್ಡಿ. ಈ ದಾವೆಯನ್ನು ಎಂ.ವಿ.ಲಕ್ಮಣರೆಡ್ಡಿ ರವರು ಪ್ರತಿವಾದಿಗಳ ವಿರುದ್ದ ಹೂಡಿರುತ್ತಾರೆ. ದಾವಾ ಆಸ್ತಿಯಸ.ನಂ. 36/1. 13 ಮತ್ತು 17 ಗುಂಟೆ ಜಮೀನಿನ ಸಂಬಂಧ ಈ ದಾವೆಯನ್ನು ಹೂಡಲಾಗಿದೆ. 13 ಗುಂಟೆಯ ಪೂರ್ವಕ್ಕೆ ನಾರಾಯಣಗೌಡ, ಪಶ್ಚಿಮಕ್ಕೆ ಲಕ್ಷ್ಮಣ ರೆಡ್ಡಿ, ಉತ್ತರಕ್ಕೆ ಮುನಿವೆಂಕಟರೆಡ್ಡಿ ಮತ್ತು ದಕ್ಷಿಣಕ್ಕೆ ನಾರಾಯಣಗೌಡ ರವರ ಜಮೀನು ಇರುತ್ತದೆ. 17 ಗುಂಟೆಯ ಪೂರ್ವಕ್ಕೆ ನಾರಾಯಣಗೌಡ , ಪಶ್ಚಿಮಕ್ಕೆ ರಾಮಚಂದ್ರಪ್ಪ , ಉತ್ತರಕ್ಕೆ ನಾರಾಯಣಗೌಡ ಮತ್ತು ದಕ್ಷಿಣಕ್ಕೆ ಲಕ್ಷ್ಮಣರೆಡ್ಡಿ ರವರ ಜಮೀನು ಇರುತ್ತದೆ.

ವಾದಿಯ ಎಷ್ಟು ಜಮೀನನ್ನು ಹೊಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿಗೆ ಯಾವ ರೀತಿ ದಾವಾ ಸ್ವತ್ತು ಬಂದಿದೆ ಎಂದು ಗೊತ್ತಿಲ್ಲ. 1ನೇ ಪ್ರತಿವಾದಿಯು ಸ.ನಂ. 36 ರಲ್ಲಿ 1 ಎಕರೆ 1 ಗುಂಟೆ ಜಮೀನನ್ನು 4ನೇ ಪ್ರತಿವಾದಿಯಿಂದ ದಿಃ2-2-2008 ರ ಕ್ರಯ ಪತ್ರದ ಮೂಲಕ ಕೊಂಡುಕೊಂಡಿದ್ದಾರೆ ಎಂದರೆ ಸರಿ. ಪೂರ್ವಕ್ಕೆ ಮುನಿವೆಂಕಟಪ್ಪ , ಪಶ್ಚಿಮಕ್ಕೆ ಇದೇ ಸ.ನಂ. ಉಳಿಕೆ ಜಮೀನು, ಉತರಕ್ಕೆ ಮುನಿವೆಂಕಟರೆಡ್ಡಿ ಮತ್ತು ದಕ್ಷಿಣಕ್ಕೆ ಎ.ಎಂ.ನಾರಾಯಣಗೌಡ – ಈ ಚೆಕ್ಕುಬಂದಿ ಮೇಲೆ ಹೇಲಳಿದ 1 ಎಕರೆ 1 ಗುಂಟೆ ಜಮೀನಿಗೆ ಅನ್ವಯಿಸುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಮಾವಿನ ಗಿಡಗಳು ಇವೆ ಎಂದರೆ ಸರಿ. ಮಾವಿನ ಗಿಡಗಳು ಸುಮಾರು 20 ವರ್ಷ ಪ್ರಾಯವನ್ನು ಹೊಂದಿವೆ ಎಂದರೆ ಸಾಕ್ಷಿಯು 5 ವರ್ಷಗಳ ಹಿಂದೆ ಅವುಗಳನ್ನು ನಾಟಿ ಮಾಡಲಾಗಿದೆ ಎನ್ನುತ್ತಾರೆ.

ಸದರಿ ಮಾವಿನ ತೋಪಿನಲ್ಲಿ ಫಸಲು ಕೊಡುತ್ತಿದೆ ಎಂದರೆ ಸಾಕ್ಷಿಯು 2-3 ವರ್ಷಗಳಿಂದ ಫಸಲು ಬರುತ್ತಿದೆ ಎನ್ನುತ್ತಾರೆ. 15 ವರ್ಷಗಳಿಂದ ಫಸಲು ಬರುತ್ತಿದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು 2ನೇ ಪ್ರತಿವಾದಿಯ ಮಗ ಎಂದರೆ ಸರಿ. 7-3-2007 ರಲ್ಲಿ 2ನೇ ಪ್ರತಿವಾದಿಯು 10

ಗುಂಟೆ ಜಮೀನನ್ನು ಪಾಪಣ್ಣ ರವರ ಮಗ ಚಂಗಪ್ಪ ಎಂಬುವವರಿಂದ ಕೊಂಡುಕೊಂಡಿದ್ದಾರೆ ಎಂದರೆ ನಿಜ. ಪೂರ್ವಕ್ಕೆ ಎ.ಎಂ.ನಾರಾಯಣಗೌಡ, ಪಶ್ಚಿಮಕ್ಕೆ ಹರಿನಾಥ, ಉತ್ತರಕ್ಕೆ ಮುನಿವೆಂಕಟರೆಡ್ಡಿ ಮತ್ತು ದಕ್ಷಿಣಕ್ಕೆ ಎ.ಎಂ.ನಾರಾಯಣಗೌಡ - ಈ ಚೆಕ್ಕುಬಂದಿ ಮೇಲೆ ಹೇಳಿದ 10 ಗುಂಟೆ ಜಮೀನಿಗೆ ಅನ್ವಯಿಸುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಬೋರ್‌ವೆಲ್ ಹಾಗೂ ಸಣ್ಣ ಮನೆ ಇದೆ ಎಂದರೆ ಸರಿ. ಸದರಿ ಬೋರ್‌ವೆಲ್ ಅನ್ನು 1ನೇ ಪ್ರತಿವಾದಿ ಹಾಕಿಸಿರುತ್ತಾರೆ ಎಂದರೆ ಸರಿ. ಸದರಿ 10 ಗುಂಟೆ ಜಮೀನಿನಲ್ಲೂ ಮಾವಿನ ಗಿಡಗಳು ಇವೆ. ಸದರಿ ಮಾವಿನ ಗಿಡಗಳಿಗೆ 20 ವರ್ಷ ಪ್ರಾಯ ಇದೆ ಎಂದರೆ ಸಾಕ್ಷಿಯು 5 ವರ್ಷ ಪ್ರಾಯ ಇದೆ ಎನ್ನುತ್ತಾರೆ.

ಮೇಲೆ ಹೇಳಿದ 1 ಎಕರೆ 1 ಗುಂಟೆ ಜಮೀನು ಮತ್ತು 10 ಗುಂಟೆ ಜಮೀನು 1 ಮತ್ತು 2ನೇ ಪ್ರತಿವಾದಿಗಳ ಜಂಟಿ ಸ್ವಾಧೀನದಲ್ಲಿದೆ ಎಂದರೆ ಸರಿ. 1 ಮತ್ತು 2ನೇ ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ವಾಸವಿದ್ದಾರೆ ಎಂದರೆ ಸರಿ. ಮೇಲೆ ಹೇಳಿದ ಮಾವಿನ ಗಿಡಗಳು 15 ವರ್ಷಗಳಿಂದ ಫಸಲು ಕೊಡುತ್ತಿವೆ ಎಂದರೆ ಸರಿಯಲ್ಲ.

3ನೇ ಪ್ರತಿವಾದಿ ನನಗೆ ಗೊತ್ತು. 37 ಗುಂಟೆ ಜಮೀನಿನಲ್ಲಿ ಸದರಿಯವರು ಸ್ವಾಧೀನದಲ್ಲಿದ್ದು ಮಾವಿನ ಗಿಡಗಳನ್ನು ಬೆಳೆಸಿದ್ದಾರೆ ಎಂದರೆ ಸರಿ. ಸದರಿ ಮಾವಿನ ಮರಗಳು 40 ವರ್ಷ ಪ್ರಾಯದ್ದು ಅಂದರೆ ಸಾಕ್ಷಿಯು ಸುಮಾರು 5 ವರ್ಷಗಳ ಹಿಂದೆ ಅವುಗಳನ್ನು ನಾಟಿ ಮಾಡಲಾಗಿದೆ ಎನ್ನುತ್ತಾರೆ. ದಿಃ20-11-2008 ರಂದು 4ನೇ ಪ್ರತಿವಾದಿಯಿಂದ ಸ.ನಂ. 36/1 ರಲ್ಲಿ 20 ಗುಂಟೆ ಜಮೀನನ್ನು 3ನೇ ಪ್ರತಿವಾದಿಯು ಕ್ರಯದ ಕರಾರು ಪತ್ರದ ಮೂಲಕ ಕೊಂಡುಕೊಂಡು ಅದರ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯ ಆ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ.

ಮೇಲ್ಕಂಡ ಜಮೀನಿನ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣಕ್ಕೆ ಕ್ರಮವಾಗಿ ನಾರಾಯಣಗೌಡ, ಅದೇ ಸ.ನಂ. ಉಳಿಕೆ ಜಮೀನು, 1 ಮತ್ತು 2ನೇ ಪ್ರತಿವಾದಿಗಳು, ಶಿವನ ರಾಮಚಂದ್ರಪ್ಪ ಇವರುಗಳ ಜಮೀನು ಇದೆ ಎಂದರೆ ಸರಿ. ಸದರಿ ಜಮೀನಿನಲ್ಲಿ 30 –40 ವರ್ಷ ಹಳೆಯದಾದ ಮಾವಿನ ತೋಪು ಇದೆ ಎಂದರೆ ಸರಿಯಲ್ಲ.

ನಾನು ನನ್ನ ಪ್ರಮಾಣ ಪತ್ರದಲ್ಲಿ ನನಗೆ ಜ್ಞಾಪಕ ಬಂದ ದಿನದಿಂದ ದಿಃ2-4-2010 ರವರೆಗೆ ದಾವಾ ಸ್ವತ್ತಿನ ಸ್ವಾಧೀನದಲ್ಲಿ ವಾದಿ ಇದ್ದಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ಸುಳ್ಳು ಚೆಕ್ಕುಬಂದಿಯನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ನನ್ನ ಬಾಬ್ತು ಸ.ನಂ. 45 ಜಮೀನು ಇದೆ. ಅದರ ವಿಸ್ತೀರ್ಣ 1 ಎಕರೆ 35 ಗುಂಟೆ ಇರುತ್ತದೆ. ನನ್ನ ಜಮೀನಿನ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣಕ್ಕೆ ಕ್ರಮವಾಗಿ ಮುನಿವೆಂಕಟರೆಡ್ಡಿ , ಲಕ್ಷ್ಮಣರೆಡ್ಡಿ , ರಸ್ತೆ ಮತ್ತು ಲಕ್ಷ್ಮಣರೆಡ್ಡಿ ರವರ ಜಮೀನು ಇದೆ. ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ದಿನಾಂಕಃ2-4-2010 ರಂದು ನಾನು ದಾವಾ ಸ್ವತ್ತಿನ ಬಳಿ ಇದ್ದೆ. ಆ ದಿನ ವಾದಿ ದಾವಾ ಸ್ವತ್ತಿನ ಬಳಿ ಇರಲಿಲ್ಲ. 2-4-2010 ರಂದು ಪ್ರತಿವಾದಿಗಳು ದಾವಾ ಸ್ವತ್ತಿಗೆ ಯಾವುದೇ ಅಕ್ರಮ ಪ್ರವೇಶ ಮಾಡಿಲ್ಲ ಅಂದರೆ ಸರಿಯಲ್ಲ. ಸ.ನಂ.36/1 ರಲ್ಲಿ 1 ಮತ್ತು 2ನೇ ಪ್ರತಿವಾದಿಗಳು 13 ಗುಂಟೆ ಮತ್ತು 3 ಮತ್ತು 4ನೇ ಪ್ರತಿವಾದಿಗಳು 17 ಗುಂಟೆ ಜಮೀನಿನಲ್ಲಿ ಅಕ್ರಮ ಸ್ವಾಧೀನದಲಿಲ್ಲ , ಆ ಬಗ್ಗೆ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಸುಮಾರು 20 ವರ್ಷಗಳಿಂದ ಹಾಗೂ 3 ನೇ ಪ್ರತಿವಾದಿಯು ಸುಮಾರು 40 ವರ್ಷಃಗಳಿಂದ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ವಾದಿ ನನ್ನ ಮಾವ ಎಂದರೆ ಸರಿ. ಅವರ ಮಾತನ್ನು ಕೇಳಿ ನಾನು ನ್ಯಾಯಾಲಯದ ಮುಂದೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸಂಪೂರ್ಣ ಸುಳ್ಳು ನುಡಿದಿದ್ದೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

ಓಹೇಕೇ ಸರಿಯಿದೆ

(ಶಫೀರ್.ಎ.ಎ.)
ಹೆಚ್ಚುವರಿ ಸಿಜೆ ಮತ್ತು ಜೆಎಂಎಫ್‌ಸಿ
ಮುಳಬಾಗಿಲು.

ಒಎಸ್ ನಂಬರ್: 223/2013
ಪಿಡಬ್ಲ್ಯೂಃ 3

ಸಾಕ್ಷಿಯನ್ನು ಕರೆಸಿ ದಿನಾಂಕಃ 08-12-2015 ರಂದು ಪ್ರಮಾಣಿಸಲಾಯಿತು.

ಪಾಟಿ ಸವಾಲು ಃ- ಪ್ರತಿವಾದಿಗಳ ಪರ ಶ್ರೀ ಡಿವಿಎಂ ವಕೀಲರಿಂದಃ-

ಸಾಕ್ಷಿಗೆ ಕನ್ನಡ ತಿಳಿಯದ ಕಾರಣ ಕೆ.ಕವಿತಾ ವಕೀಲರನ್ನು ಪ್ರಮಾಣ ಭೋದಿಸಿ ತೆಲುಗು-ಕನ್ನಡ ಭಾಷಾಂತರಕ್ಕಾಗಿ ನೇಮಿಸಿಕೊಳ್ಳಲಾಯಿತು.

ಈ ದಾವೆಯನ್ನು ಲಕ್ಷ್ಮಣರೆಡ್ಡಿ ಎನ್ನುವವರು ಪ್ರತಿವಾದಿಗಳ ವಿರುದ್ಧ ಹೂಡಿದ್ದಾರೆ. ದಾವಾ ಸ್ವತ್ತಿನ ಸ.ನಂ. 36. ವಾದಿಯು 13 ಗುಂಟೆ ಮತ್ತು 17 ಗುಂಟೆ ಜಮೀನಿನ ವಿಚಾರವಾಗಿ ಈ ದಾವೆಯನ್ನು ಹೂಡಿದ್ದಾರೆ . 13 ಗುಂಟೆ ಪೂರ್ವಕ್ಕೆ ನಾರಾಯಣಗೌಡ , ಪಶ್ಚಿಮಕ್ಕೆ ಲಕ್ಷ್ಮಣರೆಡ್ಡಿ, ಉತ್ತರಕ್ಕೆ ಮುನಿವೆಂಕಟರೆಡ್ಡಿ ಮತ್ತು ದಕ್ಷಿಣಕ್ಕೆ ನಾರಾಯಣಗೌಡ ರವರ ಜಮೀನು ಇದೆ. 17 ಗುಂಟೆ ಪೂರ್ವಕ್ಕೆ ನಾರಾಯಣಗೌಡ , ಪಶ್ಚಿಮಕ್ಕೆ ಲಕ್ಷ್ಮಣರೆಡ್ಡಿ, ಉತ್ತರಕ್ಕೆ ನಾರಾಯಣಗೌಡ ಮತ್ತು ದಕ್ಷಿಣಕ್ಕೆ ರಾಮಚಂದ್ರಪ್ಪ ರವರ ಜಮೀನು ಇದೆ.

ಮೇಲೆ ಹೇಳಿದ ಚೆಕ್ಕುಬಂದಿಯ ಒಳಗೆ ಬರುವ ಜಮೀನಿನಲ್ಲಿ ಮಾವಿನ ತೋಪು ಇದೆ. ಸದರಿ ಮಾವಿನ ತೋಪಿಗೆ 5-6 ವರ್ಷ ಪ್ರಾಯ ಇದೆ. ನಾರಾಯಣಗೌಡರ ಜಮೀನಿನ ಪೂರ್ವಕ್ಕೆ ನನ್ನ ಜಮೀನು ಇದೆ. ನನ್ನ ಜಮೀನಿನ ಸ.ನಂ. 31 ಇದ್ದು ಅದರ ವಿಸ್ತೀರ್ಣ 1 ಎಕರೆ ಇದೆ. ನನ್ನ ಜಮೀನಿನ ಪೂರ್ವಕ್ಕೆ ಮುನಿವೆಂಕಟರೆಡ್ಡಿ , ಪಶ್ಚಿಮಕ್ಕೆ ನಾರಾಯಣಗೌಡ , ಉತ್ತರಕ್ಕೆ ವೆಂಕಟರೆಡ್ಡಿ ಮತ್ತು ದಕ್ಷಿಣಕ್ಕೆ ವೆಂಕಟರಾಮರೆಡ್ಡಿ ರವರ ಜಮೀನು ಇದೆ. ನನ್ನ ಜಮೀನಿನಲ್ಲಿ ಕಡಲೆಕಾಯಿ ಬೆಳೆ ಬೆಳೆಯುತ್ತಿದ್ದೇನೆ.

1ನೇ ಪ್ರತಿವಾದಿ ಗೊತ್ತು. 4ನೇ ಪ್ರತಿವಾದಿಯಿಂದ 1 ನೇ ಪ್ರತಿವಾದಿಯು 1 ಎಕರೆ 1 ಗುಂಟೆ ಜಮೀನನ್ನು ಕೊಂಡುಕೊಂಡಿದ್ದಾರೆ ಎಂದರೆ ಸರಿ. ಆ ಬಗ್ಗೆ ದಿಃ2-2-2008 ರಂದು ಕ್ರಯ ಪತ್ರ ಆಗಿದೆ ಎಂದರೆ ಸರಿ. ಪೂರ್ವಕ್ಕೆ ಮುನಿವೆಂಕಟಪ್ಪ , ಪಶ್ಚಿಮಕ್ಕೆ ಇದೇ ಸ.ನಂ. ಉಳಿಕೆ ಜಮೀನು , ಉತ್ತರಕ್ಕೆ ಮುನಿವೆಂಕಟರೆಡ್ಡಿ ಮತ್ತು ದಕ್ಷಿಣಕ್ಕೆ ಎ.ಎಂ.ನಾರಾಯಣಗೌಡ – ಈ

ಚೆಕ್ಕುಬಂದಿಯಲ್ಲಿ ಮೇಲೆ ಹೇಳಿದ 1 ಎಕರೆ 1 ಗುಂಟೆ ಜಮೀನು ಇದೆ ಎಂದರೇ ಸಾಕ್ಷಿಯು ಪೂರ್ವ, ಉತ್ತರ ಮತ್ತು ದಕ್ಷಿಣದ ಚೆಕ್ಕುಬಂದಿಯನ್ನು ಒಪ್ಪಿಕೊಳ್ಳುತ್ತಾರೆ . ಸಾಕ್ಷಿಯು ಮುಂದುವರೆದು ಪಶ್ಚಿಮಕ್ಕೆ ಲಕ್ಷ್ಮಣರೆಡ್ಡಿ ರವರ ಜಮೀನು ಇದೆ ಎನ್ನುತ್ತಾರೆ. ಮೇಲೆ ಹೇಳಿದ 1 ಎಕರೆ 1 ಗುಂಟೆ ಜಮೀನಿನಲ್ಲಿ ಮಾವಿನ ತೋಪು ಇದೆ ಎಂದರೆ ಸರಿ. ಸದರಿ ಜಮೀನಿನಲ್ಲಿ 1ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. 2ನೇ ಪ್ರತಿವಾದಿಯು 1ನೇ ಪ್ರತಿವಾದಿಯ ತಂದೆ ಎಂದರೆ ಸರಿ. ದಿಃ7-3-2007 ರಂದು 2ನೇ ಪ್ರತಿವಾದಿಯು ಪಾಪಣ್ಣ ರವರ ಮಗ ಚಂಗಪ್ಪ ಎಂಬುವವರಿಂದ 10 ಗುಂಟೆ ಜಮೀನನ್ನು ಖರೀದಿಸಿದ್ದಾರೆ ಎಂದರೆ ಸರಿ. ಪೂರ್ವಕ್ಕೆ ಎ.ಎಂ.ನಾರಾಯಣಗೌಡ, ಪಶ್ಚಿಮಕ್ಕೆ 1ನೇ ಪ್ರತಿವಾದಿ , ಉತ್ತರಕ್ಕೆ ಮುನಿವೆಂಕಟರೆಡ್ಡಿ ಮತ್ತು ದಕ್ಷಿಣಕ್ಕೆ 3ನೇ ಪ್ರತಿವಾದಿ ರವರ ಜಮೀನು – ಈ ಚೆಕ್ಕುಬಂದಿಯಲ್ಲಿ ಮೇಲೆ ಹೇಳಿದ 10 ಗುಂಟೆ ಹಾಗೂ ಪಂಪ್ ಹೌಸ್ ಇದೆ ಎಂದರೇ ನಿಜ. ಹಾಗೂ ಅಲ್ಲಿ ಮಾವಿನ ಗಿಡಗಳು ಇವೆ ಎಂದರೆ ನಿಜ. ಮೇಲೆ ಹೇಳಿದ ಎರಡು ಜಮೀನುಗಳಲ್ಲಿ 20 ವಷಗಳಿಗಿಂತ ಹಳೆಯ ಮಾವಿನ ತೋಪು ಇದೆ ಎಂದರೆ ಸಾಕ್ಷಿಯು 5 ವರ್ಷಗಳಿಂದ ಮಾವಿನ ತೋಪು ಇದೆ ಎನ್ನುತ್ತಾರೆ.

15 ವರ್ಷಗಳಿಂದ ಮೇಲ್ಕಾಣಿಸಿದ ಸ್ವತ್ತುಗಳಲ್ಲಿ ಮಾವಿನ ಫಸಲು ಬರುತ್ತದೆ ಎಂದರೆ ಸಾಕ್ಷಿಯು ಎರಡು ವರ್ಷಗಳಿಂದ ಅಲ್ಲಿ ಫಸಲು ಬರುತ್ತದೆ ಎನ್ನುತ್ತಾರೆ. ಫಸಲನ್ನು 1 ಮತ್ತು 2ನೇ ಪ್ರತಿವಾದಿಗಳು ಮಾರಾಟ ಮಾಡುತ್ತಿದ್ದಾರೆ ಎಂದರೆ ನಿಜ. 3ನೇ ಪ್ರತಿವಾದಿ ನನಗೆ ಗೊತ್ತು. ಆತ ಪಿತ್ರಾರ್ಜಿತವಾಗಿ ಬಂದ 37 ಗುಂಟೆ ಜಮೀನಿನಲ್ಲಿ ಸ.ನಂ. 36 ರಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸದರಿ 37 ಗುಂಟೆಯಲ್ಲಿ ಮಾವಿನ ತೋಪನ್ನು 3ನೇ ಪ್ರತಿವಾದಿ ಬೆಳೆದಿದ್ದಾರೆ ಎಂದರೆ ಸರಿ. ದಿಃ20-11-2008 ರಂದು 4ನೇ ಪ್ರತಿವಾದಿಯಿಂದ 3ನೇ ಪ್ರತಿವಾದಿಯು 14 ಗುಂಟೆ ಜಮೀನನ್ನು ಕೊಂಡುಕೊಂಡಿದ್ದಾರೆ ಎಂದರೆ ಸಾಕ್ಷಿಯು 17 ಗುಂಟೆ ಕೊಂಡುಕೊಂಡಿದ್ದಾರೆ ಎನ್ನುತ್ತಾರೆ. ಆ ಪೈಕಿ 14 ಗುಂಟೆ ವ್ಯವಸಾಯದ ಜಮೀನು ಮತ್ತು 6 ಗುಂಟೆ ಖರಾಬು ಸೇರಿದೆ ಎಂದರೆ ಸುಳ್ಳು.

ಪೂರ್ವ , ಪಶ್ಚಿಮ , ಉತ್ತರ ಮತ್ತು ದಕ್ಷಿಣಕ್ಕೆ ಕ್ರಮವಾಗಿ ನಾರಾಯಣಗೌಡ, ಅದೇ ಸ.ನಂ. ಉಳಿಕೆ, 1 ಮತ್ತು 2ನೇ ಪ್ರತಿವಾದಿ ಮತ್ತು ಶಿವನ ರಾಮಚಂದ್ರಪ್ಪ ರವರ ಜಮೀನು - ಈ ಚೆಕ್ಕುಬಂದಿಯೊಳಗೆ ಮೇಲ್ಕಾಣಿಸಿದ 3ನೇ ಪ್ರತಿವಾದಿಯ ಜಮೀನುಗಳು ಬರುತ್ತವೆ ಎಂದರೆ

ಸಾಕ್ಷಿಯು ಪೂರ್ವ , ಉತ್ತರ ಮತ್ತು ದಕ್ಷಿಣದ ಚೆಕ್ಕುಬಂದಿಗಳನ್ನು ಒಪ್ಪಿಕೊಳ್ಳುತ್ತಾರೆ . ಸಾಕ್ಷಿಯು ಮುಂದುವರೆದು ಪಶ್ಚಿಮಕ್ಕೆ ವಾದಿಯ ಜಮೀನು ಇದೆ ಎನ್ನುತ್ತಾರೆ. ಮೇಲೆ ಹೇಳಿದ ಎರಡು ಜಮೀನುಗಳಲ್ಲಿ ಸುಮಾರು 40 ವರ್ಷಗಳಿಂದ ಮಾವಿನ ತೋಪುಗಳು ಇವೆ ಎಂದರೆ ಸಾಕ್ಷಿಯು 5 ವರ್ಷಗಳಿಂದ ಮಾತ್ರ ಮಾವಿನ ತೋಪು ಇದೆ ಎನ್ನುತ್ತಾರೆ. ಎರಡು ವರ್ಷಗಳಿಂದ 3ನೇ ಪ್ರತಿವಾದಿ ಮಾವಿನ ಫಸಲನ್ನು ಮಾರಾಟ ಮಾಡುತ್ತಿದ್ದಾರೆ. 30-40 ವರ್ಷಗಳಿಂದ 3ನೇ ಪ್ರತಿವಾದಿಯ ಜಮೀನಿನಲ್ಲಿ ಮಾವಿನ ತೋಪು ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ2-4-2010 ರಂದು ನಾನು ನಮ್ಮ ಊರಿನಲ್ಲಿದ್ದೆ. ಆ ದಿನ ಯಾವ ವಾರ ಎಂದು ನೆನಪಿಲ್ಲ. ನನ್ನ ಜೊತೆ ವೆಂಕಟಾಚಲಪತಿ ಎನ್ನುವವರು ಇದ್ದರು. ಆ ದಿನ ವಾದಿ ಊರಿನಲ್ಲಿರಲಿಲ್ಲ. ದಿಃ2-4-2010 ರಂದು ನಾನಾಗಲಿ ವೆಂಕಟಾಚಲಪತಿಯವರಾಗಲಿ ದಾವಾ ಆಸ್ತಿಯ ಬಳಿ ಇರಲಿಲ್ಲ ಹಾಗೂ 1 ಮತ್ತು 2ನೇ ಪ್ರತಿವಾದಿಗಳು 13 ಗುಂಟೆ ಜಮೀನಿನಲ್ಲಿ ಮತ್ತು 3 ಮತ್ತು 4ನೇ ಪ್ರತಿವಾದಿಗಳು 17 ಗುಂಟೆ ಜಮೀನಿನಲ್ಲಿ ಅಕ್ರಮ ಪ್ರವೇಶ ಮಾಡಿರಲಿಲ್ಲ ಎಂದರೆ ಸರಿಯಲ್ಲ. ವಾದಿಯು ಚಂಗಪ್ಪ ಎಂಬುವವರಿಂದ ದಾವಾ ಆಸ್ತಿಯನ್ನು ಕೊಂಡುಕೊಂಡಿರುತ್ತಾರೆ. ಅದನ್ನು ಯಾವಾಗ ಕೊಂಡುಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಾನು ಚಿಕ್ಕವನಿದ್ದಾಗ ವಾದಿ ಅದನ್ನು ಕೊಂಡುಕೊಂಡಿರುತ್ತಾರೆ ಎನ್ನುತ್ತಾರೆ.

ರುಕ್ಮಣಿಯಮ್ಮ ನನ್ನ ಅಕ್ಕ. ಆಕೆ ವಾದಿಯ ಪತ್ನಿ ಎಂದರೆ ಸರಿ. ರುಕ್ಮಣಿಯಮ್ಮ ಮತ್ತು ನಾನು ಒಂದೇ ತಾಯಿಯ ಮಕ್ಕಳು ಎಂದರೆ ಸರಿ. ವಾದಿ ನನ್ನ ಹತ್ತಿರದ ಸಂಬಂಧಿಯಾದ ಕಾರಣ ಅವರಿಗೆ ಸಹಾಯ ಮಾಡುವ ಸಲುವಾಗಿ ಈ ದಾವೆಯಲ್ಲಿ ನನಗೆ ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಪ್ರಮಾಣ ಪತ್ರದಲ್ಲಿ ಸಂಪೂರ್ಣ ಸುಳ್ಳು ವಿಚಾರಗಳನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

ಓಹೇಕೇ ಸರಿಯಿದೆ

(ಶಫೀರ್.ಎ.ಎ.)
ಹೆಚ್ಚುವರಿ ಸಿಜೆ ಮತ್ತು ಜೆಎಂಎಫ್‌ಸಿ
ಮುಳಬಾಗಿಲು.